ಬಿಡುಗಡೆಯಾಗಿ ನಾಲ್ಕು ವರ್ಷಗಳ ನಂತರ ಈ ಸಿನಿಮಾ ಬಿಡುಗಡೆಯಾಗುತ್ತಿದೆ. ಒಬ್ಬ ನಿರ್ದೇಶಕನಿಗೆ ಈ ಅಂತರ ತುಸು ಹೆಚ್ಚೇ ಅಲ್ಲವೇ ಎಂದು ಕೇಳಿದರೆ 'ಹೌದು' ಎಂದು ತಲೆಯಾಡಿಸುತ್ತಾರೆ ಅವರು.

'ಮೊದಲ ಸಿನಿಮಾ ಹೊಂದಿಸಿ ಬರೆಯಿರಿ ಮಾಡಿದಾಗ ನಾನೊಂದು ವ್ಯಾಕ್ಯೂಮ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ ಎಂದು ಬಲವಾಗಿ ಅನಿಸುತ್ತಿತ್ತು. ಅದರಿಂದ ಹೊರಬರಬೇಕು ಎಂದು ಅನ್ನಿಸಿಯೇ ಒಂದು ಬ್ರೇಕ್ ತೆಗೆದುಕೊಂಡಿದ್ದೆ. ನಂತರ 2019ರಲ್ಲಿ ಈ ಕಥೆಯನ್ನು ಯೋಚಿಸಿ ಬರೆಯಲು ಆರಂಭಿಸಿದೆ. ಕೊರೊನಾ ಕಾರಣಕ್ಕೆ ಇನ್ನಷ್ಟು ತಡವಾಗಿ ಈಗ ಬಿಡುಗಡೆಯಾಗುತ್ತಿದೆ' ಎನ್ನುವ ಅವರ ಪ್ರಕಾರ ಈ ಚಿತ್ರಕ್ಕೆ ಓಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗುವುದು ಅನಿವಾರ್ಯ ಆಯ್ಕೆಯಾಗಿತ್ತು.

'ಇದು ಪ್ರಾಕ್ಟಿಕಲ್ ಆಗಿ ಯೋಚನೆ ಮಾಡುವ ಸಮಯ. ಈಗ ಎಷ್ಟು ಸಿನಿಮಾಗಳು ಬಿಡುಗಡೆಗೆ ಕಾಯುತ್ತಿವೆಯೆಂದರೆ ಮುಂದಿನ ಜನವರಿ–ಫೆಬ್ರುವರಿಯವರೆಗೆ ಚಿತ್ರಮಂದಿರಗಳು ಸಿಗುವುದು ಕಷ್ಟ. ಥಿಯೇಟರ್ ದೊರೆತು ಬಿಡುಗಡೆ ಮಾಡಿದರೂ ಒಂದು ವಾರಕ್ಕಿಂತ ಹೆಚ್ಚು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಅಲ್ಲದೆ ಓಟಿಟಿಯಲ್ಲಿ ಇಂಡಿಪೆಂಡೆಂಟ್ ಸಿನಿಮಾಗಳು ಹೆಚ್ಚು ಬಿಡುಗಡೆಯಾಗುತ್ತಿದ್ದವೇ ಹೊರತು ಕನ್ನಡದ ಗಟ್ಟಿ ಕಂಟೆಂಟ್‌ನ ಸಿನಿಮಾ ನೇರವಾಗಿ ಬಿಡುಗಡೆ ಆಗಿರಲಿಲ್ಲ. ಹಾಗಾಗಿ 'ರತ್ನನ್ ಪ್ರಪಂಚ'ದಂಥ ಒಂದು ಸಿನಿಮಾ ಬಿಡುಗಡೆ ಆಗುವುದು ಅಗತ್ಯವಾಗಿತ್ತು. ಈ ಸಿನಿಮಾ ಕನ್ನಡದ ಇತರ ಒಳ್ಳೆಯ ಸಿನಿಮಾಗಳಿಗೂ ದಾರಿ ಮಾಡಿಕೊಡಬಹುದು' ಅನ್ನುವ ಅವರು, 'ಓಟಿಟಿ ನಮ್ಮ ಭವಿಷ್ಯ. ಚಿತ್ರಮಂದಿರಗಳು ಮತ್ತು ಓಟಿಟಿಗಳು ಒಟ್ಟಿಗೇ ಹೋಗಲೇಬೇಕು. ಹಾಗಾಗಿ ಅದಕ್ಕೆ ಹೊಂದಿಕೊಳ್ಳುವುದು ನಮಗೆ ಅನಿವಾರ್ಯವೂ ಅಲ್ಲವೇ?' ಎಂದು ನಗುತ್ತಾರೆ.

ಹಾಗೆಂದು ಕನ್ನಡ ಸಿನಿಮಾ ಭವಿಷ್ಯದ ಬಗ್ಗೆಯೂ ರೋಹಿತ್‌ಗೆ ಅಚಲ ನಂಬಿಕೆ ಇದೆ. 'ಈಗ ಸ್ಪರ್ಧೆ ಹೆಚ್ಚಾಗಿದೆ. ಇಲ್ಲಿ ಬದುಕಿಕೊಳ್ಳಬೇಕು ಎಂದರೆ ಒಳ್ಳೆಯ ಸಿನಿಮಾಗಳನ್ನು ಮಾಡಲೇಬೇಕಾದ ಪರಿಸ್ಥಿತಿ ಉಂಟಾಗಿದೆ. ಅದಕ್ಕೆ ತಕ್ಕ ಹಾಗೆ ಒಳ್ಳೆಯ ಕಂಟೆಂಟ್ ಇಟ್ಟುಕೊಂಡು ಸಿನಿಮಾ ಮಾಡುವವರು ದೊಡ್ಡ ಪ್ರೊಡಕ್ಷನ್ ಹೌಸ್ ಜೊತೆಗೆ ಕೈಜೋಡಿಸುತ್ತಿದ್ದಾರೆ. ಇದು ಖಂಡಿತ ಒಳ್ಳೆಯ ಸೂಚನೆ' ಎನ್ನುವ ರೋಹಿತ್, ಆ ಹೊಸ ಬದಲಾವಣೆಗೆ ಬೆಂಬಲ ನೀಡುವ ಹಾಗೆ ಮುಂದಿನ ಸಿನಿಮಾಗಳನ್ನು ಮಾಡುತ್ತ ಹೋಗುವ ಹಂಬಲವನ್ನೂ ಹೊಂದಿದ್ದಾರೆ. ■

# ರಚಿತಾ! ರಾವಣ ಶೋಧ



ರಚಿತಾ ರಾಮ್ ತಮ್ಮ ವೃತ್ತಿಜೀವನದ ದೊಡ್ಡ ತಿರುವಿನಲ್ಲಿಯೇ ನಿಂತಿರುವ ಹಾಗಿದೆ. ಸ್ಟಾರ್ ನಟರ ನಟಿ ಎಂಬ ಹಣೆಪಟ್ಟಿಯೊಟ್ಟಿಗೇ ಚಿತ್ರರಂಗಕ್ಕೆ ಬಂದ ಅವರು ಈಗ ಪ್ರಯೋಗಮುಖಿಯಾಗಿದ್ದಾರೆ. ಅದಕ್ಕೆ ಸಾಕ್ಷಿಯೆಂಬಂತೆ ಇತ್ತೀಚೆಗೆ ಬಿಡುಗಡೆಯಾದ ಅವರ 'ಶಬರಿ ಸರ್ಚಿಂಗ್ ಫಾರ್ ರಾವಣ' ಸಿನಿಮಾದ ಪೋಸ್ಟರ್ ಇದೆ.

ನವೀನ್ ಶೆಟ್ಟಿ ನಿರ್ದೇಶನದ ಈ ಚಿತ್ರದಲ್ಲಿ ರಚಿತಾ ತಮ್ಮ ಹಳೆಯ ಎಲ್ಲ ಇಮೇಜ್‌ಗಳನ್ನು ಹೊಡೆದುಹಾಕುವ ಹಾಗೆ ಹೊಸದೇ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಹೇರ್‌ಸ್ಟೈಲ್ ಬದಲಿಸಿಕೊಂಡು, ಕಣ್ಣಿಗೆ ಲೆನ್ಸ್ ಹಾಕಿಕೊಂಡು ರಾವಣನಿಗಾಗಿಯೇ ಕಾದು ಕೂತಿರುವಂತೆ ಕೂತಿರುವ ಪೋಸ್ಟರ್‌ನಲ್ಲಿ ಅವರ ಜೊತೆಗೆ ಹಾಲುಬಿಳುಪಿನ ಬೆಕ್ಕೊಂದು ಜೊತೆಯಾಗಿದೆ.

ಇದೊಂದು ಸೇಡಿನ ಕಥೆಯಂತೆ. ಅದಕ್ಕೆ ತಕ್ಕ ಹಾಗೆ ಥ್ರಿಲ್ಲರ್, ಸಸ್ಪೆನ್ಸ್ ಅಂಶಗಳೂ ಇರಲಿವೆ ಎಂಬ ಸುಳಿವನ್ನು ಚಿತ್ರತಂಡವೇ ನೀಡಿದೆ. ಶೋಧನೆಯ ವಾತಾವರಣವನ್ನೇ ಕಟ್ಟಿಕೊಡುವ ಹಾಗೆ ಸ್ಟಡಿ ಟೇಬಲ್, ಟೇಬಲ್ ಲ್ಯಾಂಪ್‌ಗಳ ನಡುವೆ ತೀವ್ರ ಯೋಚನಾಮಗ್ನರಾಗಿ ಕೂತಿರುವ ರಚಿತಾ ಚಿತ್ರ ಅವರ ಅಭಿಮಾನಿಗಳ ಎದೆಯೊಳಗೆ ಕುತೂಹಲದ ಒಗ್ಗರಣೆ ಎಸೆಯುವುದಂತೂ ಖಚಿತ. ಇದರಲ್ಲಿ ಅವರು ಎರಡು ಛಾಯೆಗಳುಳ್ಳ ಪಾತ್ರದಲ್ಲಿ ನಟಿಸುತ್ತಿದ್ದಾರಂತೆ. ಇನ್ನೊಂದು ಛಾಯೆ ಹೇಗಿರಬಹುದು ಎಂಬ ಕುತೂಹಲವನ್ನು ಚಿತ್ರತಂಡ ಹಾಗೆಯೇ ಉಳಿಸಿದೆ. ಅವರ ಜೊತೆಗೆ ರಘು ಮುಖರ್ಜಿ, ಅರ್ಚನಾ ಕೊಟ್ಟಿಗೆ ಅವರೂ ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. ಆಗಸ್ಟ್‌ನಲ್ಲಿ ಒಂದು ಹಂತದ ಚಿತ್ರೀಕರಣ ಮುಗಿಸಿದ್ದು, ದಸರೆಯ ನಂತರ ಮುಂದಿನ ಹಂತದ ಚಿತ್ರೀಕರಣದಲ್ಲಿ ಚಿತ್ರತಂಡ ತೊಡಗಿಕೊಳ್ಳಲಿದೆ. ■

# ಹೊರನಾಡ ಕನ್ನಡಿಗನ 'ಮೈಸೂರು' ಕನಸು!

'ಮೈಸೂರು' ಎಂದಾಕ್ಷಣ ಮನಸ್ಸು ಅರಳುತ್ತದೆ. ಇದೇ ಹೆಸರನ್ನು ಇಟ್ಟುಕೊಂಡಿರುವ ಸಿನಿಮಾವೊಂದು ತಯಾರಾಗುತ್ತಿದ್ದು, ಚಿತ್ರೀಕರಣ ಬಹುತೇಕ ಮುಗಿದಿದೆ.

ಹೆಸರೇನೋ ಮೈಸೂರು ಎಂದಿದೆ. ಆದರೆ ಈ ಕಥೆಯ ನಾಯಕ ಇರುವುದು ಮೈಸೂರಿನಲ್ಲಲ್ಲ, ಹೊರರಾಜ್ಯದಲ್ಲಿ. ಹಾಗಾಗಿ ಇದು ಹೊರರಾಜ್ಯದ ಕನ್ನಡಿಗನ ನವಿರು ಪ್ರೇಮಕಥೆ. ಬರೀ ಪ್ರೇಮವಷ್ಟೇ ಅಲ್ಲ, ಸಂಗೀತವೂ ಈ ಸಿನಿಮಾದ ಜೀವಾಳ. ವಾಸುದೇವ ರೆಡ್ಡಿ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಅವರೇ ಹಣವನ್ನೂ ಹೂಡಿದ್ದಾರೆ. ಸಂವಿತ್ ಮತ್ತು ಪೂಜಾ ಈ ಚಿತ್ರದ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

ಜ್ಯೂ. ನರಸಿಂಹರಾಜು, ಸತ್ಯಜಿತ್, ಕುರಿ ಪ್ರತಾಪ್ ಮುಂತಾದವರು ತಾರಾಗಣದಲ್ಲಿದ್ದಾರೆ. ವಿಜಯ್ ರಾಜ್ ಸಂಗೀತ ಮತ್ತು ಭಾಸ್ಕರ್ ವಿ. ರೆಡ್ಡಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ■

